# ತುಳುವರ ಜನಪದ ಆಚರಣೆಯಲ್ಲಿ ಎಡೆ (ಮಿಸೆಲ್) ಪದ್ಧತಿ

ರತ್ನಮಾಲಾ
ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ತೆಂಕನಿಡಿಯೂರು, ಉಡುಪಿ.

DOI: https://doi.org/10.5281/zenodo.18116499

**ABSTRACT:**

ಪ್ರಸ್ತುತ ಲೇಖನವು ತುಳುನಾಡಿನ ಸಾಂಸ್ಕೃತಿಕ ಅನನ್ಯತೆಯ ಅವಿಭಾಜ್ಯ ಅಂಗವಾದ 'ಎಡೆ' (ಮಿಸೆಲ್) ಇಡುವ ಪದ್ಧತಿಯನ್ನು ಸವಿಸ್ತಾರವಾಗಿ ವಿಶ್ಲೇಷಿಸುತ್ತದೆ. ತುಳುವರ ನಂಬಿಕೆಯಂತೆ ಮೃತಪಟ್ಟ ವ್ಯಕ್ತಿಗಳು ಸ್ವರ್ಗಕ್ಕೆ ಹೋಗದೆ, ಹಿರಿಯರ ಗುಂಪನ್ನು ಸೇರಿ ಕುಟುಂಬವನ್ನು ರಕ್ಷಿಸುತ್ತಾರೆ. ಮೃತರ 16ನೇ ದಿನದ 'ಬೊಜ್ಜ'ದ ಸಂದರ್ಭದಲ್ಲಿ ನಡೆಸುವ ಧಾರ್ಮಿಕ ವಿಧಿಗಳು, 'ಕುಲೆಕುಂಟು' ಇಡುವ ಸಂಪ್ರದಾಯ ಮತ್ತು ಹಬ್ಬ ಹರಿದಿನಗಳಲ್ಲಿ ನೀಡುವ ಅಗೇಲ್ ಸೇವೆಯ ಬಗ್ಗೆ ಇಲ್ಲಿ ವಿವರಿಸಲಾಗಿದೆ. ವಿಶೇಷವಾಗಿ ಸಸ್ಯಾಹಾರಿ 'ಜೈನ ಅಗೆಲ್' ಮತ್ತು ಕ್ರೈಸ್ತ ಧರ್ಮದೊಂದಿಗಿನ ಸಮನ್ವಯದ ಆಚರಣೆಗಳು ತುಳುನಾಡಿನ ಸಾಮರಸ್ಯದ ಸಂಕೇತಗಳಾಗಿವೆ. ಒಟ್ಟಾರೆಯಾಗಿ, ಈ ಪದ್ಧತಿಯು ತುಳುವರ ಕೂಡುಕುಟುಂಬದ ಒಗ್ಗಟ್ಟು ಮತ್ತು ಪೂರ್ವಜರ ಮೇಲಿರುವ ಅಪಾರ ಗೌರವವನ್ನು ಪ್ರತಿಬಿಂಬಿಸುತ್ತದೆ.

**KEYWORDS:**

ತುಳುನಾಡು, ಎಡೆ/ಮಿಸೆಲ್ ಪದ್ಧತಿ, ಬೊಜ್ಜ/ಉತ್ತರಕ್ರಿಯೆ, ಜೈನ ಅಗೆಲ್, ಪೂರ್ವಜರ ಆರಾಧನೆ.

ತುಳುನಾಡು ಅತ್ಯಂತ ಸುದೀರ್ಘವಾದ ಮತ್ತು ವೈವಿಧ್ಯಮಯವಾದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ ನಾಡಾಗಿದೆ. ಉತ್ತರದಲ್ಲಿ ಸ್ವರ್ಣಾನದಿ, ದಕ್ಷಿಣದಲ್ಲಿ ಚಂದ್ರಗಿರಿನದಿ, ಪೂರ್ವದಲ್ಲಿ ಸಹ್ಯಾದ್ರಿ ಹಾಗೂ ಪಶ್ಚಿಮದಲ್ಲಿ ಅರಬೀ ಸಮುದ್ರದಿಂದ ಆವರಿಸಲ್ಪಟ್ಟಿದೆ. ಹೀಗೆ ನಾಲ್ಕೂ ದೆಸೆಗಳಲ್ಲೂ ನೈಸರ್ಗಿಕ ಮೇರೆಯನ್ನು ಹೊಂದಿರುವ ತುಳುನಾಡು ರಾಜಕೀಯವಾಗಿ ಕನ್ನಡದ ಹಲವು ಪ್ರಬಲ ರಾಜಮನೆತನಗಳಿಂದ ಆಳಲ್ಪಟ್ಟಿದ್ದರೂ, ತನ್ನ ಸಾಂಸ್ಕೃತಿಕ ಅನನ್ಯತೆಗೆ ಧಕ್ಕೆ ಬಾರದಂತೆ ಸಮನ್ವಯ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದೆ. ತುಳುನಾಡು ತನ್ನ ಗರ್ಭದಲ್ಲಿ ಸಕ್ರಿಯವೂ ಚಲನಶೀಲವೂ ಆದ ಜನಪದ ಸಾಹಿತ್ಯದ ದೊಡ್ಡ ನಿಧಿಯನ್ನು ಪೋಷಿಸಿಕೊಂಡು ಬಂದಿದೆ. ಆರಾಧನೆ, ಆಚರಣೆಯ ವಿಷಯಕ್ಕೆ ಬಂದಾಗ ಇಂದಿಗೂ ಮೂಲ ಪರಂಪರೆ, ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿದೆ. ಅನಾದಿಕಾಲದಿಂದ ನಡೆಯುತ್ತ ಬಂದ ಅನೇಕ ಆಚರಣೆಗಳು ತುಳುನಾಡಿನಲ್ಲಿ ಇಂದಿಗೂ ಜೀವಂತವಾಗಿವೆ. ಅಂತಹದರಲ್ಲಿ ಎಡೆ ಇಡುವ ಪದ್ಧತಿ (ಮಿಸೆಲ್ ಬಡಿಸುವ ಪದ್ಧತಿಯೂ) ಒಂದಾಗಿದೆ.

ದ್ರಾವಿಡ ಮೂಲದ ತುಳುವರಲ್ಲಿ ವೈದಿಕ ಪರಂಪರೆಯಂತೆ ಮೋಕ್ಷದ

ಕಲ್ಪನೆಯಿಲ್ಲ. ಹಾಗಾಗಿ ತುಳುವ ಕೂಡುಕುಟುಂಬದ ಯಾವ ವ್ಯಕ್ತಿ ತೀರಿಕೊಂಡರೂ ಮೃತ ವ್ಯಕ್ತಿಗೆ ಮರಣ ಸಂಬಂಧ ನಡೆಯುವ ಉತ್ತರ ಕ್ರಿಯೆ (ತುಳುವಿನಲ್ಲಿ ಉತ್ತರಕ್ರಿಯೆಗೆ 'ಬೊಜ್ಜ' ಎಂಬ ಪದವಿದೆ) ಮುಗಿದೊಡನೆ ಕುಟುಂಬದ ಮೂಲ ಮನೆಯಲ್ಲಿ (ಸಾಮಾನ್ಯವಾಗಿ ಕುಟುಂಬ ಮನೆತನದ ದೈವಗಳನ್ನು ನಂಬಿಕೊಂಡು ಬಂದಿರುವ ಮನೆಯಲ್ಲಿ) ಆ ವ್ಯಕ್ತಿ ಗತಿಸಿದ 16ನೇ ದಿನದ ರಾತ್ರಿ ಒಂದು ತೆಂಗಿನಕಾಯಿ, ಒಂದು ಬಿಳಿಬಟ್ಟೆ (ಗಂಡು ಪ್ರೇತಕ್ಕೆ) ಸೀರೆ (ಹೆಣ್ಣು ಪ್ರೇತಕ್ಕೆ) ಒಂದು ಕೋಳಿ ಇವಿಷ್ಟನ್ನು ಮೂಲ ಮನೆಯವರ ಪೂರ್ವಾನುಮತಿ ಪಡೆದು ಅಲ್ಲಿಗೆ ಕೊಂಡು ಹೋಗಿ ಕುಟುಂಬದ ಹಿರಿಯರು/ಯಜಮಾನನ ಉಪಸ್ಥಿತಿಯಲ್ಲಿ ಮನೆಯ ಹೊರಭಾಗದಲ್ಲಿ ಬಾಳೆಎಲೆ (ಕೊಡಿ ಎಲೆ) ಹಾಕಿ ತೆಂಗಿನಕಾಯಿ ಒಡೆದು ಕೋಳಿ ಕೊಯ್ಯುವುದು. ತದನಂತರ ಆ ಮನೆಯಲ್ಲಿ ಅಡುಗೆ ಮಾಡಿ, ಅಡುಗೆ ಕೋಣೆಯಲ್ಲಿ ಕೊಡಿ ಬಾಳೆಎಲೆಯಲ್ಲಿ ಎಡೆ ಇಡುವ ಸಂಪ್ರದಾಯವಿದೆ. ಕೆಲವು ಕುಟುಂಬಗಳಲ್ಲಿ ಈ ಮೊದಲು ಗತಿಸಿದ ಹಿರಿಯರಿಗೆ ಎಡೆ ಇಡುವ ಕ್ರಮ ಇರುವುದರಿಂದ ಈ ಮೊದಲು ಎಷ್ಟು ಬಾಳೆಎಲೆಗಳಲ್ಲಿ ಎಡೆ ಹಾಕಿರುತ್ತಾರೋ ಅಷ್ಟೇ ಬಾಳೆ ಎಲೆಗಳನ್ನು ಹಾಕಿ ಒಂದು ಎಡೆಯನ್ನು ಪ್ರತ್ಯೇಕವಾಗಿ ಹಾಕುತ್ತಾರೆ. ಪ್ರಸ್ತುತ ಗತಿಸಿದ ಪ್ರೇತವನ್ನು ಈ ಹಿಂದೆ ಗತಿಸಿದ ಪ್ರೇತಗಳ ಜೊತೆ ಸೇರಿಕೊಳ್ಳುವಂತೆ ಪ್ರಾರ್ಥಿಸಿಕೊಳ್ಳುತ್ತಾರೆ. ಇದಾದ ಬಳಿಕ ಸ್ವಲ್ಪ ಅಂತರದಲ್ಲಿದ್ದ ಎಲೆಯನ್ನು ಇತರೆ ಬಾಳೆಎಲೆಗಳ ಜೊತೆ ಸೇರಿಸುತ್ತಾರೆ. ಈ ರೀತಿ ಮಾಡುವುದರಿಂದ ಹೊಸ ಪ್ರೇತವು ಈ ಹಿಂದೆ ಗತಿಸಿದ ಹಿರಿಯ ಪ್ರೇತಗಳ ಗುಂಪಿಗೆ ಸೇರಿಕೊಂಡಿತೆಂಬುವುದು ತುಳುವರ ನಂಬಿಕೆಯಾಗಿದೆ.

ಗತಿಸಿದ ವ್ಯಕ್ತಿಯ ಮನೆಯಲ್ಲಿ ಉತ್ತರಕ್ರಿಯೆ ನಡೆಯುವ ಸಂದರ್ಭದಲ್ಲಿ ಕುಟುಂಬದ ಹೆಂಗಸರು ಮುರ್ಕುಮೀಪಿನಿ (ಮುಳುಗಿ ಸ್ನಾನ ಮಾಡುವುದು) ಕ್ರಮ ನಡೆದು ಒದ್ದೆ ಬಟ್ಟೆಯಲ್ಲಿ ಮನೆಯ ಒಳಗಡೆ ಬಂದು ಅಡುಗೆ ಮಾಡಿ ತಯಾರಿಸಿದ ಅಡುಗೆಯನ್ನು "ನೀರ್ ನಿರೆಲ್" (ಧೂಪೆಯ ಕಟ್ಟೆ) ಕಟ್ಟೆಯ ಚಾವಡಿ/ಪಡಸಾಲೆ/ ಜಗಲಿ/ಹಜಾರದಲ್ಲಿ ಮಡಿವಾಳ/ಭಂಡಾರಿ ಸಮುದಾಯದವರ ಸಹಕಾರದಲ್ಲಿ ಒಂದು ಕಂಚುಲೋಹದ ಬಟ್ಟಲಿನಲ್ಲಿ ಬಡಿಸುವರು. ಆ ಬಳಿಕ ವ್ರತ ಹಿಡಿದ ಹೆಣ್ಣು ಮಗಳು ತಲೆಗೆ ಸೆರಗನ್ನು ಎಳೆದು ಬಡಿಸಿರುವ ಬಟ್ಟಲನ್ನು ತಲೆಯ ಮೇಲೆ ಇರಿಸಿಕೊಂಡು ಕುಟುಂಬಸ್ಥರ ಜೊತೆ ಮೂರು ಸುತ್ತು "ಪೆದಂಬು ಸುತ್ತು" (ಅಪ್ರದಕ್ಷಿಣೆಯಾಗಿ) ಹಾಕುತ್ತಾಳೆ. ಈ ಹೆಣ್ಣುಮಗಳು ಗತಿಸಿದ ವ್ಯಕ್ತಿಯ ತೀರಾ ಹತ್ತಿರದ ಬಂಧು (ಹೆಂಡತಿ/ ಮಗಳು) ಆಗಿದ್ದು ಮನೆಯ ಮುಖ್ಯ ದ್ವಾರದವರೆಗೆ ಹಿಮ್ಮುಖ ಚಲನೆಯಲ್ಲಿ ಬರುತ್ತಾಳೆ. ವ್ಯಕ್ತಿ ಗತಿಸಿದ ದಿನದಿಂದ ಉತ್ತರಕ್ರಿಯೆಯ ತನಕ ವ್ರತನಿಷ್ಠೆಯಲ್ಲಿರುವ ಕುಟುಂಬದ ಗಂಡು ಸಂತತಿ ಹೊಸ್ತಿಲ ಹೊರಭಾಗದಲ್ಲಿ ನಿಂತಿದ್ದು ಕುಟುಂಬದ ಹೆಣ್ಣಿನ ಕೈಯಿಂದ ಅವನ ಕೈಗೆ ಅದನ್ನು ವರ್ಗಾಯಿಸುತ್ತಾರೆ. ಅದೇ ಅನ್ನ ಪಲ್ಯ ಅಥವಾ ಪೂ-ಅರಿ ಯನ್ನು ಗತಿಸಿದ ವ್ಯಕ್ತಿಗೆ ಕ್ರಮ ಪ್ರಕಾರ ಬಡಿಸುತ್ತಾರೆ. ಈ ಕ್ರಮವನ್ನು ತುಳುವಿನಲ್ಲಿ 'ಸುಡಲೆಗೆ ನುಪ್ಪು ದೀಪಿನಿ' ಎಂಬುವುದಾಗಿ ಕರೆಯುತ್ತಾರೆ. ಆ ಬಳಿಕ ಮಧ್ಯಾಹ್ನದ ಸಮಯದಲ್ಲಿ ಯಾವುದೇ ಎಡೆ ಬಡಿಸುವ ಕ್ರಮ ಇರುವುದಿಲ್ಲ.

ತುಳುವ ಜನಪದರ ಯಾವುದೇ ಜಾತಿ ಜನಾಂಗದಲ್ಲಿ ಸತ್ತ ದಿನ ಮಧ್ಯಾಹ್ನ ಕಾಗೆಗೆ/ ದನಕ್ಕೆ ಎಡೆ ಬಡಿಸಿ ಗಂಟೆಗಟ್ಟಲೆ ಅಂದರೆ ಕಾಗೆ ಬಂದು ಆ ಬಡಿಸಿದ ಎಲೆಯನ್ನು ಮುಟ್ಟುವವರೆಗೆ ಕಾಯುವ ಕ್ರಮ ಇರಲಿಲ್ಲ. ಇದು ಇತ್ತೀಚಿನ ಕಾಲಘಟ್ಟದಲ್ಲಿ ಈ ಕ್ರಮ ಪಾಲುಪಡೆದುಕೊಂಡಿರುವುದು ಎಂಬುವುದಾಗಿ ತುಳುನಾಡಿನ ಜಾನಪದ ವಿದ್ವಾಂಸ ಬನ್ನಂಜೆ ಬಾಬು ಅಮೀನ್ ಅವರು ಅಭಿಪ್ರಾಯಪಡುತ್ತಾರೆ.

ಆ ದಿನ ರಾತ್ರಿ ಮೀನು/ಕೋಳಿ ಪಲ್ಯದ ಜೊತೆ ತೀರಿಕೊಂಡ ವ್ಯಕ್ತಿಗೆ ಎಡೆ ಬಡಿಸುತ್ತಾರೆ. ಅಡುಗೆ ಕೋಣೆಯಲ್ಲಿ ಮಣೆಯಿಟ್ಟು ಒಂದು ಕೊಡಿ ಬಾಳೆ ಎಲೆಯನ್ನು ತೆಂಕಣಕ್ಕೆ ಮುಖಮಾಡಿ ಬಡಿಸುತ್ತಾರೆ. ಇಲ್ಲಿ ಯಾವುದೇ ಕಾರಣಕ್ಕೂ ಒಂದಕ್ಕಿಂತ ಜಾಸ್ತಿ ಬಾಳೆ ಎಲೆಯನ್ನು ಹಾಕುವುದಿಲ್ಲ. ತುಳುವ ವಾಡಿಕೆಯಂತೆ ಬೇರೆ ದಿನಗಳಲ್ಲಿ ಒಂದು ಎಲೆಯನ್ನು ಹಾಕಿ ಬಡಿಸುವ ಕ್ರಮ ಇರುವುದಿಲ್ಲ. ಒಂದು ವೇಳೆ ದೈವದ ಮನೆಯಲ್ಲಿ ಮರಣ ಸಂಭವಿಸಿದ್ದರೂ ಇತರೆ ಪ್ರೇತಗಳ ಜೊತೆಗೆ ತೀರಿಕೊಂಡವರ ಪ್ರೇತವನ್ನು ಸೇರಿಸುವುದು 16 ದಿನಕ್ಕೆ ಆಗಿದ್ದು ಅದೇ ದಿನ ಎಡೆ ಬಡಿಸುವುದು ಮೂಲತುಳುವರಲ್ಲಿ ಇರುವ ಸಂಪ್ರದಾಯವಾಗಿದೆ.

ಈ ರೀತಿ ಎಡೆ ಬಡಿಸಿ ಮನೆಯ ಹಿರಿಯರು ಪ್ರೇತಾತ್ಮಗಳಿಗೆ ಸೀರೆ/ಬಿಳಿಧೋತಿ ಇತ್ಯಾದಿ ಇಟ್ಟು ಅವನು/ಅವಳು ಧರಿಸುತ್ತಿದ್ದ ಚಿನ್ನಾಭರಣ, ವೀಳ್ಯವನ್ನು ಇಟ್ಟು ಅದನ್ನು ಸ್ವೀಕರಿಸಿ ಕುಟುಂಬದ ಸದಸ್ಯರನ್ನು ರಕ್ಷಿಸುವಂತೆ ಪ್ರಾರ್ಥಿಸುತ್ತಾರೆ. ಅದಾದ ಬಳಿಕ ಎಲ್ಲರೂ ಹೊರನಡೆಯುತ್ತಾರೆ. ಯಾವುದೇ ಕಾರಣಕ್ಕೂ ಈ ರೀತಿ ಗತಿಸಿದ ಕುಟುಂಬದ ಹಿರಿಯರಿಗೆ ಬಡಿಸಿಟ್ಟ ಎಲೆಯನ್ನು ಮೂಲ ತುಳುವರು ಎಂದಿಗೂ ಮನೆಯ ಹೊರಗಡೆ ಕೊಂಡು ಹೋಗಿ ಇಡುವುದಿಲ್ಲ.

ಪೂರ್ವ ಕಟ್ಟಳೆಯಂತೆ ಕುಲೆಕುಂಟು (ಸತ್ತ ವ್ಯಕ್ತಿಯ ಹೆಸರಿನಲ್ಲಿ ಮೀಸಲಿಡುವ ಬಟ್ಟೆ) ಎಂಬುದಕ್ಕೆ ಕರಂಗದ ಕುಂಟು ಎಂದು ಕರೆಯುತ್ತಿದ್ದರು. ಜವುಳಿ ಅಂಗಡಿಯಿಂದ ಕೋರಬಟ್ಟೆಯನ್ನು ಖರೀದಿಸಿ ದೀಪಾವಳಿ ಹಬ್ಬದ ನರಕ ಚತುರ್ದಶಿಯ (ತುಳುವರ ಸತ್ತವರ ಹಬ್ಬ) ದಿನದಂದು ಪ್ರೇತಗಳಿಗೆ ಮಿಸೆಲ್ ಹಾಕುವ ವೇಳೆ (ಎಡೆಯಿಡುವ ವೇಳೆ) ಈ ಬಟ್ಟೆಯನ್ನು ಇಡುತ್ತಾರೆ. ಆ ದಿನದಂದು ಮತ್ತು ಬಲಿಪಾಡ್ಯಮಿ ದಿನ (ಗೋಪೂಜೆ) ದಂದು ಎರಡು ದಿನಗಳ ಕಾರ್ಯಕ್ರಮದ ತರುವಾಯ ಕುಲೆಕುಂಟನ್ನು ಪ್ರತ್ಯೇಕವಾಗಿ ಇಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಕುಲೆಕುಂಟು ಇಡುವಾಗ ಜನಸಾಮಾನ್ಯರು ತೊಡುವ ಹೊಸ ಉಡುಗೆಗಳನ್ನು ಇಡುತ್ತಾರೆ. ಮನೆಯ ಮಹಿಳೆಯರು ನಿತ್ಯ ಉಪಯೋಗಿಸುವ ಸೀರೆ, ಗಂಡಸರು ಉಪಯೋಗಿಸುವ ಗುಣಮಟ್ಟದ ಧೋತಿ/ಮುಂಡುಗಳನ್ನು ಖರೀದಿಸಿ ಪ್ರೇತಗಳಿಗೆ ಇಟ್ಟು ನಂತರ ತಮ್ಮ ಉಪಯೋಗಕ್ಕೆ ಬಳಸಿಕೊಳ್ಳುತ್ತಾರೆ. ಬಹಳ ಹಿಂದಿನ ಕಾಲದಲ್ಲಿ ಮನೆಯ ಹೊರಗಡೆ ಅರಶಿನ, ಎಣ್ಣೆ, ಬಿಸಿ ನೀರನ್ನು ಇಡುವ ಪದ್ಧತಿಯಿತ್ತು. ಕಾರಣ ಗತಿಸಿದ ಹಿರಿಯರು ಆ ದಿನ ಬಂದು ಸ್ನಾನ ಮಾಡುತ್ತಾರೆ ಎಂಬ ನಂಬಿಕೆ ಇಲ್ಲಿನ ಜನಪದರಲ್ಲಿತ್ತು. ನಂತರ ಹೊಸ ಬಟ್ಟೆಯೊಂದಿಗೆ, ಬಾಚಣಿಗೆ, ಗೊಂಡೆ ಹೂವನ್ನು ಇಟ್ಟು ಬಾಳೆ ಕಾಯಿ,

ಕುಂಬಳಕಾಯಿ ಹಾಗೂ ಮೀನು ಪದಾರ್ಥವಲ್ಲದೆ ಅರಸಿನ ಎಲೆಯ ಕಡುಬನ್ನು ಸತ್ತವರ ಹಬ್ಬದ ಈ ಸಂದರ್ಭದಲ್ಲಿ ಬಡಿಸುತ್ತಾರೆ. ವೈದಿಕ ಪರಂಪರೆಯಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಮಾಸಾಂತಿಕ, ವರ್ಷಾಂತಿಕ ಶ್ರಾದ್ಧಗಳು ನಡೆಯುತ್ತದೆ. ವೈದಿಕೇತರರಲ್ಲಿ ಕಾಣಸಿಗುವ ಆಚರಣೆಯಲ್ಲಿ ಎಲ್ಲಾ ಆತ್ಮಗಳನ್ನು ಒಂದೇ ಬಾರಿಗೆ ಕುಟುಂಬಸ್ಥರು ಪ್ರಾರ್ಥಿಸಿಕೊಳ್ಳುವ ವಿಶೇಷತೆಯು ಇಲ್ಲಿ ಕಾಣಸಿಗುತ್ತದೆ. ಕೂಡು ಕುಟುಂಬದ ಒಗ್ಗಟ್ಟು, ಸೌಹಾರ್ದತೆ, ಐಕ್ಯಮತಗಳು ಈ ಆಚರಣೆಗಳಲ್ಲಿ ಎದ್ದು ಕಾಣುತ್ತವೆ. ಮಾಹಿತಿಗಳ ಕೊರತೆಯಿಂದ ಈ ಮೊದಲು ಈ ಕುಲೆಕುಂಟನ್ನು ದೈವಸ್ಥಾನದ ಒಳಗೆ ಇಡುತ್ತಿದ್ದರು. ದೈವದ ಮಂಚ ಹಾಗೂ ಕೋಣೆಯನ್ನು ಹೊರತುಪಡಿಸಿ ಪ್ರತ್ಯೇಕವಾಗಿ ಈ ಬಟ್ಟೆಯನ್ನು ಇಡಬೇಕು.

ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಮಾರಿಜಾತ್ರೆ/ಮಂಕಾಳಿ ಜಾತ್ರೆ ನಡೆಯುವ ಪದ್ಧತಿಯಿದೆ. ಈ ಜಾತ್ರೆ ಸಾಮೂಹಿಕವಾಗಿ ನಡೆಯುವ ಆಚರಣೆಯಾಗಿದ್ದು ಈ ಸಂದರ್ಭದಲ್ಲಿ ಕೋಳಿ/ಆಡು ಕಡಿದು ಅರ್ಪಣೆ ಮಾಡುವ ಕ್ರಮ ಈಗಲೂ ಚಾಲ್ತಿಯಲ್ಲಿದೆ. ಮಾರಿ ಓಡಿಸಿದ ನಂತರ ಬಲಿ ಕೊಟ್ಟ ಕೋಳಿ/ಆಡುಗಳನ್ನು ಪದಾರ್ಥ ಮಾಡಿ ಅಡುಗೆಯನ್ನು ಮನೆಯ ಒಳಗಡೆ ಗತಿಸಿದ ಹಿರಿಯರಿಗೆ ಎಡೆ ಬಡಿಸುವ ಸಂಪ್ರದಾಯ ತುಳುನಾಡಿನೆಲ್ಲೆಡೆ ಪ್ರಚಲಿತದಲ್ಲಿದೆ. ಇಂತಹ ಸಂದರ್ಭದಲ್ಲಿ ಒಂದು ಕೊಡಿ ಬಾಳೆ ಎಲೆಯನ್ನು ಪ್ರತ್ಯೇಕವಾಗಿ ಇಟ್ಟು ಅದಕ್ಕೆ ಶುದ್ಧ ಸಸ್ಯಾಹಾರ ಖಾದ್ಯಗಳನ್ನು ಬಡಿಸುತ್ತಾರೆ. ಇದನ್ನು ಜೈನ ಅಗೆಲ್ ಎಂದು ಕರೆಯುತ್ತಾರೆ. ಬಡಿಸಿಟ್ಟ ಈ ಎಡೆಯನ್ನು ಮನೆಯ ಅಂಗಳದಿಂದ ಕೊಂಡೊಯ್ದು ಅಲ್ಲಿ ದೀಪದ ಕೋಲು ಹಾಗೂ ನೀರನ್ನು ಚಿಮುಕಿಸಿ ಇಡುತ್ತಾರೆ. ಇದನ್ನು ಹೊರತುಪಡಿಸಿ ಇನ್ಯಾವುದೇ ಎಡೆಯನ್ನು ಮನೆಯ ಹೊರಗಡೆ ಇಡುವ ಕ್ರಮ ಇರುವುದಿಲ್ಲ.

ಜೈನ ಅಗೆಲ್ ಉಡುಪಿ ಪರಿಸರದ ಗ್ರಾಮಗಳಲ್ಲಿ ನಡೆಯುವ ಮಾರಿಹಬ್ಬದಲ್ಲಿ ಮನೆಗಳಲ್ಲಿಯೇ ಎಡೆ ಇಡುವ ಸಂದರ್ಭ ಮಾಡುವ ಕ್ರಮವಾಗಿದೆ. ಇದು ತುಳುನಾಡನ್ನು ಆಳಿದ ಜೈನ ಸಮುದಾಯಕ್ಕೆ ನೀಡುವ ಗೌರವ ಎಂಬುವುದು ಒಂದು ಪ್ರತೀತಿಯಾದರೆ, ಇನ್ನೊಂದೆಡೆ ಜೈನ ಮತಾವಲಂಬಿಗಳು ಶುದ್ಧ ಸಸ್ಯಾಹಾರಿಗಳಾದ ಕಾರಣ ಅವರ ನೆನಪಿನಲ್ಲಿ ಎಡೆಬಡಿಸುವ ಸಂದರ್ಭದಲ್ಲಿಯೂ ಶುದ್ಧ ಸಸ್ಯಾಹಾರವನ್ನು ಬಡಿಸುತ್ತಾರೆ. ಇನ್ನೊಂದು ಐತಿಹ್ಯದ ಪ್ರಕಾರ ಅನ್ಯ ಪ್ರದೇಶದಿಂದ ಆಗಮಿಸಿದ ಜೈನರ ಪ್ರಭಾವಕ್ಕೆ ಒಳಗಾದ ಇಲ್ಲಿನ ಜನರು ಮೌಢ್ಯ ಹಾಗೂ ಕಂದಾಚಾರಗಳಿಂದ ರೋಸಿ ಹೋಗಿ ಜೈನ ಮತಕ್ಕೆ ಮತಾಂತರಗೊಂಡು ಅದರಲ್ಲಿನ ಆಚರಣೆಗಳಿಗೆ ಒಗ್ಗಿಕೊಳ್ಳದೆ ಮೂಲಧರ್ಮಕ್ಕೂ ಪ್ರವೇಶವನ್ನು ಪಡೆಯಲಾರದ ಸಂದಿಗ್ಧತೆಗೆ ಒಳಗಾಗಿ ಕೊನೆಗೆ ಅವಸಾನಗೊಂಡ ಈ ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ಎಡೆಯನ್ನು ಬಡಿಸಿ ಮನೆಯ ಹೊರಗಡೆ ಇಡುತ್ತಾರೆ. ಇಲ್ಲಿ ಮೂಲ ಧರ್ಮದಿಂದ ಪ್ರತ್ಯೇಕವಾಗಿ ಅನ್ಯ ಧರ್ಮಕ್ಕೆ ವಲಸೆ ಹೋದ ಕಾರಣದಿಂದ ಮನೆಯ ಹೊರಗೆ ಎಡೆ ಇಡುವ ಪದ್ಧತಿ ಆಚರಣೆಯ ಕ್ರಮವಾಗಿ ಗುರುತಿಸಿಕೊಳ್ಳುತ್ತಿದೆ. ಕೆಲವು ಪ್ರದೇಶಗಳಲ್ಲಿ ನೀರಿನ ಹರಿವು ಇರುವ ತೋಡು (ಸಣ್ಣ ತೊರೆ) ಹಾಗೂ ನದಿ ತೀರದಲ್ಲಿಯೂ ಜೈನ ಅಗೆಲ್ ಇಡುವ ಪದ್ಧತಿಯಿದೆ.

ಹಲವಾರು ಕಾರಣಗಳಿಂದ ತುಳುನಾಡಿನ ದೈವಾರಾಧನೆಯನ್ನು ನಂಬಿಕೊಂಡ ಜೈನ ಸಮುದಾಯವು ತಮ್ಮ ಆಚರಣೆಯಲ್ಲಿ ಕಠಿಣ ಧರ್ಮದ ಪಾಲನೆಯನ್ನು ಮಾಡುತ್ತಿದ್ದರೂ ಈ ಪ್ರದೇಶದ ಆಳ್ವಿಕೆಯನ್ನು ಸುಸೂತ್ರವಾಗಿ ನಡೆಸುವ ಕಾರಣಕ್ಕೆ ದೈವಾರಾಧನೆಯನ್ನು ಒಲಿಸಿಕೊಳ್ಳುವ ಅನಿವಾರ್ಯತೆಯನ್ನು ಇಲ್ಲಿ ಕಾಣಬಹುದು. ರಕ್ತೇಶ್ವರಿ, ಮೂಜಿಲ್ನಾಯ, ಕೊಡಮಣಿತ್ತಾಯ, ಧರ್ಮರಸು, ಉಳ್ಳಾಯ ಮುಂತಾದ ಅರಸು ಹಾಗೂ ರಾಜನ್ ದೈವಗಳ ಆರಾಧನೆ ಕ್ರಮ ಪ್ರಕಾರಗಳನ್ನು ತಾವೇ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಕೊಡಮಣಿತ್ತಾಯ, ಮಾರವಾಂಡಿ ಹಾಗೂ ಮೂಜಿಲ್ನಾಯ ದೈವಗಳ ಮುಕ್ಕಾಲ್ದಿಯಾಗಿ ಜೈನ ಧರ್ಮದವರು ಗುರುತಿಸಿಕೊಂಡಿದ್ದಾರೆ. ಜೈನ ಧರ್ಮದ ಅನೇಕ ಬೀಡು, ಗುತ್ತು, ಬರ್ಕೆಗಳಲ್ಲಿ ದೈವಗಳ ಭಂಡಾರ ಇರುವುದನ್ನು ಕಾಣಬಹುದು. ತುಳುನಾಡಿನ ಜನರ ಧಾರ್ಮಿಕ ಪರಂಪರೆಯಲ್ಲಿ ನಾಯಕತ್ವ ಹಾಗೂ ಉಸ್ತುವಾರಿಯಲ್ಲಿ ಜೈನಧರ್ಮಕ್ಕೆ ವಿಶೇಷ ಪ್ರಾತಿನಿಧ್ಯವನ್ನು ಕಲ್ಪಿಸಲಾಗಿದೆ. ರಾಜಾಳ್ವಿಕೆಯ ಒಂದು ಕೊಂಡಿಯಾಗಿಯೂ ಇದು ಗುರುತಿಸಿಕೊಂಡಿದ್ದು, ತುಳುನಾಡಿನ ಜನಪದ ಆಚರಣೆ ಮತ್ತು ದೈವಾರಾಧನೆಯು ಒಂದು ಧರ್ಮಕ್ಕೆ ಸೀಮಿತವಾಗಿರದೆ ಒಟ್ಟು ಪ್ರಭುತ್ವದ ಆಧಾರದ ನೆಲೆಯಲ್ಲಿ ಇರುವುದನ್ನು ಗಮನಿಸಬಹುದಾಗಿದ್ದು ಈ ಎಲ್ಲಾ ಅಂಶಗಳು ತುಳುನಾಡಿನ ಜನರು ಜೈನಧರ್ಮಕ್ಕೂ ತಮ್ಮ ಆಚರಣೆಯ ಭಾಗವಾಗಿ ಮಣೆ ಹಾಕಿರುವುದನ್ನು ಜೈನ ಅಗೆಲ್‌ನಲ್ಲಿ ಕಾಣಬಹುದು.

ಕುಟುಂಬದ ದೈವಗಳಿಗೆ ನೀಡುವ ವಾರ್ಷಿಕ ಭೋಗ (ಆಹಾರ) ಹಾಗೂ ತಂಬಿಲಗಳ ಸಂದರ್ಭದಲ್ಲಿಯೂ ಹಿರಿಯರಿಗೆ ಎಡೆ ಇಡುತ್ತಾರೆ. ದೈವಗಳಿಗೆ ತಂಬಿಲ ನೀಡಿದ ತರುವಾಯ ಬಲಿ ನೀಡಿದ ಕೋಳಿ/ಆಡುಗಳ ಪದಾರ್ಥವನ್ನು ಅಡುಗೆಮಾಡಿ ಮನೆಯಲ್ಲಿ ಹಿರಿಯರಿಗೆ ಎಡೆ ಇಡುತ್ತಾರೆ. ಕುಟುಂಬದ ದೈವಗಳಿಗೆ 'ಒಂಜಿ ಗಿಂಡೆ ಪೇರ್' (ಒಂದು ಗಿಂಡೆ ಹಾಲು) ಎಂಬ ಪದವು ದೈವಗಳಿಗೆ ಕೋಲ/ನೇಮ ಕೊಡುವ ಪದ್ಧತಿಯಾಗಿದೆ. ದೈವಗಳ ಭಂಡಾರ ಇಳಿದ ನಂತರ ಮಾನೆಚ್ಚಿಯಲ್ಲಿ ಹಾಗೂ ದೈವಗಳ ನೇಮದೆಚ್ಚಿಯಲ್ಲಿ ಮನೆಯೊಳಗೆ ಬರುವ ದೈವಗಳು ಮನೆಯ ಹಿರಿಯ ಪುರುಷ ಹಾಗೂ ಮಹಿಳೆಯಿಂದ ಹಾಲು ಪಡೆದು ಕುಡಿಯುವ ಪದ್ಧತಿಯು ಇದೇ ತೆರನಾಗಿರುತ್ತದೆ. ಗತಿಸಿದ ಹಿರಿಯರ ಆತ್ಮಗಳು ಮೂಲ ಮನೆಯಲ್ಲಿ ಇರುತ್ತವೆಯೆಂಬ ನಂಬಿಕೆಯು ತುಳುವರಲ್ಲಿ ಇದ್ದು, ಅವರ ನೆನಪುಗಳನ್ನು ಮುಂದಿನ ತಲೆಮಾರಿನ ಕೊಂಡಿಗಳಿಗೆ ತಿಳಿಸುವ ಉತ್ಕಟವಾದ ಮಾತುಗಳು ಈ ಸಂದರ್ಭಗಳಲ್ಲಿ ಕಾಣಸಿಗುತ್ತದೆ. ತಲೆಮಾರಿನ ಹಿರಿಯರು ಬಾಳಿದ ರೀತಿಯಲ್ಲಿಯೇ ನೀವೂ ಕೂಡಾ ಸತ್ಯ, ನೀತಿ ನ್ಯಾಯ, ಧರ್ಮಪರವಾದ ನಿಲುವುಗಳನ್ನು ಮುಂದುವರೆಸಿಕೊಂಡು ಹೋಗಿ; ಅದಕ್ಕೆ ಬೆಂಗಾವಲಾಗಿ ಇದ್ದುಕೊಂಡು ನಾವು ನಿಮ್ಮನ್ನು ರಕ್ಷಿಸಿಕೊಂಡು ಬರುತ್ತೇನೆ ಎಂಬ ಅಭಯವನ್ನು ದೈವಗಳು ನೀಡುತ್ತವೆ. ಗತಿಸಿದ ಹಿರಿಯರ ಬದುಕಿನಲ್ಲಿ ತೊಂದರೆಗಳಾಗಿದ್ದಲ್ಲಿ ಅಥವಾ ಅವರ ಆತ್ಮ ಸದ್ಗತಿಯಲ್ಲಿ ತೊಂದರೆಯಾಗಿದ್ದಲ್ಲಿ ಅದನ್ನು ದೈವ ವಿಚಾರಿಸುತ್ತದೆ. ಎಲ್ಲಾ ಗತಿಸಿದ ಹಿರಿಯರನ್ನು ನೆನಪಿಸುತ್ತಾ ಇಂದಿನ

ಪೀಳಿಗೆಯವರ ತಪ್ಪುಗಳಿದ್ದರೆ “ಈ ಮಣ್ಣುಡು ಅಳಿದ್ ಪೋಯಿನ ನಿಗಲ್ನ ಗುರು ಹಿರಿಯೆರನಂಚಿ ತೂದು ಗಿಂಡೆದ ಪೇರ್‌ಗು ಕೈ ಕೊರ್ಪೆ” (ಈ ಮಣ್ಣಿನಲ್ಲಿ ಬಾಳಿ ಬದುಕಿದ ನಿಮ್ಮ ಹಿರಿಯರ ಧರ್ಮ, ನ್ಯಾಯವನ್ನು ನೋಡಿಕೊಂಡು ಈಗ ಕೊಡುವ ಹಾಲನ್ನು ನಾನು ಸ್ವೀಕಾರ ಮಾಡುತ್ತೇನೆ) ಎಂಬ ನುಡಿಯನ್ನಾಡುತ್ತದೆ.

ಉಡುಪಿ ಪರಿಸರದ ಕ್ರೈಸ್ತ ಧರ್ಮದ ಕೆಲವು ಚರ್ಚುಗಳಲ್ಲಿ ವಾರ್ಷಿಕವಾಗಿ ನಡೆಯುವ ಸಂತ ಮೇರಿ ಹಬ್ಬದ ಸಂದರ್ಭದಲ್ಲಿ ಇಲ್ಲಿನ ಮೂಲತುಳುವರು ಕ್ಯಾಂಡಲ್ ಹಚ್ಚಿ ಅಲ್ಲಿ ಸಿಗುವ ಮಂಡಕ್ಕಿಯನ್ನು ಮನೆಗೆ ತಂದು ತಮ್ಮ ಕುಟುಂಬದ ಹಿರಿಯರಿಗೆ ಎಡೆ ಇಡುವ ಕ್ರಮವಿದೆ. ಇಲ್ಲಿ ಸಾಮರಸ್ಯ, ಸಹಿಷ್ಣುತೆ, ಸೌಹಾರ್ದತೆಯ ಪ್ರತೀಕವಾಗಿ ಈ ಸಂಪ್ರದಾಯವನ್ನು ಕಾಣಬಹುದಾದರೂ, ವಸಾಹತುಪೂರ್ವ ಸಂದರ್ಭದಲ್ಲಿ ಈ ಪರಿಸರದಲ್ಲಿ ತಮ್ಮ ಆರಾಧನಾ ಕೇಂದ್ರವೂ ಇದ್ದಿತು ಎಂಬುವುದು ಸ್ಥಳೀಯರ ಅಂಬೋಣ. ಅದೇನೇ ಇದ್ದರೂ ತುಳುನಾಡು ಸರ್ವಧರ್ಮ ಸಮನ್ವಯದ ಪ್ರತೀಕ. ಆರಾಧನೆಯ ಸಂದರ್ಭದಲ್ಲಿ ಯಾವುದೇ ಘರ್ಷಣೆಗಳು ಇಲ್ಲದೆ ಬಂಧುತ್ವ ಹಾಗೂ ಸಾಮರಸ್ಯದ ನೆಲೆಯಲ್ಲಿ ಇಂತಹ ಆಚರಣೆಗಳನ್ನು ತುಳುನಾಡಿನುದ್ದಕ್ಕೂ ಕಾಣಬಹುದು.

ಒಟ್ಟಿನಲ್ಲಿ ತುಳುವರ ಎಲ್ಲಾ ಹಬ್ಬ ಹರಿದಿನಗಳಲ್ಲಿ ಹಾಗೂ ಶುಭ ಕಾರ್ಯಗಳಲ್ಲಿ ಗತಿಸಿದ ಹಿರಿಯರಿಗೆ ಎಡೆಯನ್ನು ಇಡುವ ಸಂಪ್ರದಾಯವಿದೆ. ಯುಗಾದಿ, ಕದಿರು ಕಟ್ಟುವಿಕೆ, ಅಷ್ಟಮಿ, ಚೌತಿ, ದೀಪಾವಳಿ ಮುಂತಾದ ಎಲ್ಲಾ ಪರ್ವಕಾಲಗಳಲ್ಲಿ ಆಯಾ ಹಬ್ಬದ ವಿಶೇಷ ಪದಾರ್ಥಗಳನ್ನು ಹಿರಿಯರಿಗಾಗಿ ಮೀಸಲಿಟ್ಟು ಎಡೆ ಇಡುವ ಕ್ರಮವಿದೆ. ಮದುವೆ ಸಮಯದ ಮದರಂಗಿ ಶಾಸ್ತ್ರ ಹಾಗೂ ಔತಣಕೂಟದ ಸಮಯದಲ್ಲೂ ಎಡೆ ಇಡುವ ಪದ್ಧತಿಯಿದೆ. ತುಳುಜನಪದರ ನಂಬಿಕೆಯಂತೆ ಸತ್ತ ವ್ಯಕ್ತಿಗಳು ಸ್ವರ್ಗಕ್ಕೆ ಹೋಗುವುದಿಲ್ಲ. ಅವರು ಗತಿಸಿದ ತಲೆಮಾರಿನ ಹಿರಿಯ ವ್ಯಕ್ತಿಗಳೊಂದಿಗೆ ಸೇರಿಕೊಂಡು ಬದುಕಿರುವವರನ್ನು ರಕ್ಷಿಸಿ ಹಾರೈಸುತ್ತಾರೆ ಎಂಬ ಪ್ರಬಲವಾದ ನಂಬಿಕೆ ಇದೆ. ಹಾಗಾಗಿ ಬದುಕಿರುವವರ ಕಷ್ಟ ಸುಖಗಳೊಂದಿಗೆ ಗತಿಸಿದ ಹಿರಿಯರ ಪಾಲುದಾರಿಕೆ ಅಗೋಚರವಾಗಿ ಇರುತ್ತದೆ. ಆದ್ದರಿಂದ ಗತಿಸಿದ ಹಿರಿಯರ ನೆನಪಿನಲ್ಲಿ ಎಡೆ ಇಡುವ ಸಂಪ್ರದಾಯ ಇಂದಿಗೂ ತುಳುನಾಡಿನಲ್ಲಿ ಜೀವಂತವಾಗಿದೆ.

**ಮಾಹಿತಿ ನೀಡಿದವರು:**

1. ಬನ್ನಂಜೆ ಬಾಬು ಅಮೀನ್; ಜಾನಪದ ವಿದ್ವಾಂಸರು, ಉಡುಪಿ.
2. ಮೋಹನ ಪೂಜಾರಿ. ದೈವ ಮಾಧ್ಯಮಗಾರ, ಪಕ್ಕಿಬೆಟ್ಟು, ಉಡುಪಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.